# ಕೊಡಗಿನ ಗೌರಮ್ಮ ಅವರ ಕಥೆಗಳಲ್ಲಿ ಸಾಂಪ್ರದಾಯಿಕ ಪದ್ಧತಿಗಳ ಸಂಕೋಲೆ ಮತ್ತು ಬಿಡುಗಡೆಯ ತುಡಿತಗಳು

**ಸೌಂದರ್ಯ ಎಂ.ಎನ್.***

**DOI: https://doi.org/10.5281/zenodo.19415994**

**ABSTRACT**

ನವೋದಯ ಕಾಲದ ಪ್ರಮುಖ ಲೇಖಕಿ ಕೊಡಗಿನ ಗೌರಮ್ಮ ಅವರ ಕಥೆಗಳಲ್ಲಿ ಹೆಣ್ಣುಮಕ್ಕಳು ಎದುರಿಸುವ ಸಾಂಪ್ರದಾಯಿಕ ಕಟ್ಟುಪಾಡುಗಳು ಮತ್ತು ಆ ಸಂಕೋಲೆಗಳಿಂದ ಬಿಡುಗಡೆಯಾಗುವ ತುಡಿತಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. 'ವಾಣಿಯ ಸಮಸ್ಯೆ', 'ಅವಳಭಾಗ್ಯ', 'ಮನುವಿನರಾಣಿ', 'ಆಹುತಿ', 'ಹೋಗಿಯೇ ಬಿಟ್ಟಿದ್ದ' ಮತ್ತು 'ಪುನರ್ವಿವಾಹ' ಕಥೆಗಳ ಮುಖಾಂತರ ಬಾಲ್ಯವಿವಾಹ, ವರದಕ್ಷಿಣೆ, ವಿಧವಾ ಸಮಸ್ಯೆ, ವೇಶ್ಯಾವಾಟಿಕೆ ಹಾಗೂ ಜಾತಿ–ಧರ್ಮದಂತಹ ಸಾಮಾಜಿಕ ಪಿಡುಗುಗಳನ್ನು ಮಾರ್ಮಿಕವಾಗಿ ಅನಾವರಣಗೊಳಿಸಲಾಗಿದೆ. ಪುರುಷಪ್ರಧಾನ ಸಮಾಜದಲ್ಲಿ ನಾನಾ ಬಗೆಯ ಶೋಷಣೆಗೆ ಒಳಗಾದ ಸ್ತ್ರೀಯರು ಅನುಭವಿಸುವ ಮಾನಸಿಕ ತಲ್ಲಣಗಳು ಹಾಗೂ ಸ್ವತಂತ್ರ ಬದುಕಿಗಾಗಿ ಅವರು ನಡೆಸುವ ಹೋರಾಟವನ್ನು ಈ ಅಧ್ಯಯನವು ಕಟ್ಟಿಕೊಡುತ್ತದೆ. ಸ್ತ್ರೀ ಸಮಾನತೆ ಮತ್ತು ಮಾನವೀಯ ಮೌಲ್ಯಗಳ ಅತ್ಯಗತ್ಯವನ್ನು ಎತ್ತಿಹಿಡಿಯುವ ಮೂಲಕ, ಸರ್ವರೂ ಸಮಾನರೆಂಬ ಆಶಯವನ್ನು ಇದರಲ್ಲಿ ವ್ಯಕ್ತಪಡಿಸಲಾಗಿದೆ.

**KEYWORDS:** ಕೊಡಗಿನ ಗೌರಮ್ಮ, ಸಾಂಪ್ರದಾಯಿಕ ಸಂಕೋಲೆ, ಮಹಿಳಾ ಶೋಷಣೆ, ಬಿಡುಗಡೆಯ ತುಡಿತ, ನವೋದಯ ಸಾಹಿತ್ಯ.

* **ಸೌಂದರ್ಯ ಎಂ.ಎನ್.**, ಮಾನವಿಕ ಮತ್ತು ಸಮಾಜ ವಿಜ್ಞಾನ ವಿಭಾಗ, ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯ, ನಿಟ್ಟೆ ಡೀಮ್ಡ್ ಟು. ಬಿ ಯುನಿವರ್ಸಿಟಿ, ಯಲಹಂಕ, ಬೆಂಗಳೂರು.

**ಪೀಠಿಕೆ:** ಭಾರತವು ಮೂಲತಃ ಸಂಪ್ರದಾಯ ಬದ್ಧ ದೇಶ. ಇಲ್ಲಿ ಧರ್ಮ, ಜಾತಿ, ಪುರುಷ ಪ್ರಧಾನತೆಯ ಕಪಿಮುಷ್ಟಿಯಲ್ಲಿ ಸ್ತ್ರೀಯರು ಶೋಷಣೆಗೆ ಒಳಪಟ್ಟು ಅಸಹಾಯಕತೆಯ ಬೇಗುದಿಯಲ್ಲಿ ಆದಿಮಕಾಲದಿಂದಲೂ ನಲುಗುತ್ತಾ ಬಂದಿದ್ದಾರೆ. ಆಧುನಿಕ ಕಾಲಘಟ್ಟದಲ್ಲಿ ಸ್ತ್ರೀಯರಿಗೆ ಶಿಕ್ಷಣ ದೊರೆತ ಮೇಲೆ ತಮ್ಮ ನೋವು, ಭಾವನೆಗಳನ್ನು ಅಭಿವ್ಯಕ್ತಿಸಲು ಸಾಧ್ಯವಾಯಿತು. ಈ ಹಿನ್ನೆಲೆಯಲ್ಲಿ ನವೋದಯ ಕಾಲಘಟ್ಟದ ಪ್ರಮುಖ ಲೇಖಕಿಯಾದ ಕೊಡಗಿನ ಗೌರಮ್ಮ ಅವರು ತಮ್ಮ ಕತೆಗಳಲ್ಲಿ ಸಂಪ್ರದಾಯದ ಸಂಕೋಲೆ ಹಾಗೂ ಬಿಡುಗಡೆಯ ತುಡಿತದ ಬಗ್ಗೆ ಚರ್ಚಿಸಿರುವ ವಿಚಾರಗಳನ್ನು ಪ್ರಸ್ತುತ ಲೇಖನದಲ್ಲಿ ವಿಶ್ಲೇಷಿಸಲಾಗುವುದು. ಸಾಂಪ್ರದಾಯಿಕ ಕಟ್ಟುಪಾಡುಗಳಿಗೆ ಬದ್ಧವಾಗಿ ನವೋದಯ ಕಾಲದಲ್ಲಿ ಎಷ್ಟೋ ಹೆಣ್ಣು ಮಕ್ಕಳು ಕುಟುಂಬದಲ್ಲಿರುವ ಸಮಸ್ಯೆಗಳನ್ನು ಯಾರೊಂದಿಗೂ ಹೇಳಿಕೊಳ್ಳದೆ ಕಷ್ಟಗಳನ್ನು ಅನುಭವಿಸುತ್ತಾ ಮಾನಸಿಕವಾಗಿ ಬಳಲುತ್ತಿರುವುದನ್ನು ಸಹ ಕಾಣಬಹುದು. ಕೆಲವು ಸಮಸ್ಯೆಗಳನ್ನು ಕುರಿತು ಕೊಡಗಿನ ಗೌರಮ್ಮ ಅವರು ಕಥೆಗಳ ಮೂಲಕ ತಿಳಿಸಿದ್ದಾರೆ. ಉದಾಹರಣೆಗೆ ವರದಕ್ಷಿಣೆ, ಬಾಲ್ಯವಿವಾಹ, ವಿಧವಾ-ವಿವಾಹ, ಜಾತಿಧರ್ಮ ಮುಂತಾದ ಸಮಸ್ಯೆಗಳ ಬಗ್ಗೆ ತಮ್ಮ ಕಥೆಗಳಲ್ಲಿ ಚರ್ಚಿಸಿರುವುದನ್ನು ಕಾಣಬಹುದು.

'ವಾಣಿಯ ಸಮಸ್ಯೆ' ಕಥೆಯಲ್ಲಿ 'ಇಂದಿರಾ' ಎಂಬ ವಿಧವೆಯೊಬ್ಬಳು ಈ ಕಥೆಯ ನಾಯಕಿಯಾಗಿರುತ್ತಾಳೆ. ಅತಿ ಚಿಕ್ಕ ವಯಸ್ಸಿನಲ್ಲಿ ತಂದೆ ತಾಯಿಯನ್ನು ಕಳೆದುಕೊಂಡು ನಂತರ ವಿವಾಹವಾದ ಮೇಲೆ ಪ್ರಾಯದಲ್ಲಿ ಗಂಡನನ್ನೂ ಕಳೆದುಕೊಂಡಿರುತ್ತಾಳೆ. 'ಅಂದಿನ ಕಾಲದಲ್ಲಿ ಗಂಡನನ್ನು ಕಳೆದುಕೊಂಡಂತಹ ಹೆಣ್ಣನ್ನು ಯಾವ ರೀತಿಯಾಗಿ ನೋಡುತ್ತಿದ್ದರು ಎಂಬುದನ್ನು ಈ ಕಥೆಯಲ್ಲಿ ಕಾಣಬಹುದು. ಆ ಕಾಲಘಟ್ಟದಲ್ಲಿ ಪುನರ್ವಿವಾಹ ಆಗಲು ಸಾಧ್ಯವಿರುತ್ತಿರಲಿಲ್ಲ. ಅವಳು ವಿಧವೆಯಾದ ಕಾರಣದಿಂದ ಯಾರೊಂದಿಗೂ ಬೆರೆಯುತ್ತಿರಲಿಲ್ಲ ಮತ್ತು ಸ್ವತಂತ್ರವಾಗಿ ಇರಲು ಇಚ್ಛಿಸುತ್ತಿದ್ದಳು ಎಂದು ಈ ಕಥೆಯಲ್ಲಿ ಕಾಣಬಹುದು.

ಅವಳ ಸಂಬಂಧಿಕರೆಲ್ಲಾ ಅವಳ ಬಳಿ ಇರುವ ಆಸ್ತಿಗೆ ಆಸೆಪಟ್ಟರು. ಆದ್ದರಿಂದ ಇಂದು ಇವುಗಳೆಲ್ಲವನ್ನು ಬಿಟ್ಟು ಒಬ್ಬಂಟಿಯಾಗಿ ಜೀವನ ನಡೆಸುತ್ತಿದ್ದಳು. ಗಂಡ ಅವಳ ಹೆಸರಲ್ಲಿ ಸ್ವಲ್ಪ ಹಣವನ್ನು ಕೂಡಿಟ್ಟಿದ್ದ. ಆ ಹಣದಿಂದಲೇ ಅವಳು ಜೀವನ ನಡೆಸುತ್ತಿದ್ದಳು. ಈ ಸಂದರ್ಭದಲ್ಲಿ ಎದುರು ಮನೆಗೆ ಹೊಸದಾಗಿ ಬಾಡಿಗೆಗೆ ಬಂದವರು 'ವಾಣಿ' ಮತ್ತು ವೈದ್ಯ 'ರತ್ನ' ಎಂಬ ಒಂದು ಕುಟುಂಬ ಬಂದಿರುತ್ತಾರೆ. ವಾಣಿ ಸ್ವಲ್ಪ ಬಾಯಿಬಡಿಕಿ, ಮಾತಿನ ಚಟ ಜಾಸ್ತಿ. ಅವಳ ಗಂಡ ರತ್ನ ವೈದ್ಯರಾಗಿರುವುದರಿಂದ ತುಂಬಾ ಕೆಲಸವಿರುತ್ತಿತ್ತು. ವಾಣಿ ಕೆಲಸವೆಲ್ಲ ಬಿಟ್ಟು ಇಂದು ಮನೆಯಲ್ಲಿ ಕಾಲಹರಣ ಮಾಡುತ್ತಿದ್ದಳು. ರತ್ನನು ಬಂದು ಕೂಗಿದಾಗ ಓಡೋಡಿ ಹೋಗುತ್ತಿದ್ದಳು. ಮತ್ತೊಂದು ದಿನ ಇಂದು ಸಹ ವಾಣಿಯ ಮನೆಗೆ ಬರುತ್ತಾಳೆ, ಮನೆಯನ್ನು ನೋಡಿ ಏನು ಈ ವಾಣಿ ಮನೆಯನ್ನು ಸ್ವಚ್ಛತೆಯಿಂದ ಇಟ್ಟುಕೊಳ್ಳಲು ಬರುವುದಿಲ್ಲವೇ? ಎಂದು ಅವಳ ಮನಸಿನಲ್ಲಿಯೇ ಅಂದುಕೊಂಡಳು. ಒಳ್ಳೆ ಗಂಡನನ್ನು ಕೊಟ್ಟ ದೇವರು ಇವಳಿಗೆ ಒಳ್ಳೆಯ ಬುದ್ಧಿ ಕೊಟ್ಟಿಲ್ಲ ಎಂದು ಇಂದು

ಅಂದುಕೊಂಡಳು. ನನಗೂ ನನ್ನ ಗಂಡ ಇದ್ದಿದ್ದರೆ ಥೂ? ಎಂತಾ ಯೋಚನೆ ಎಂದು ಅವಳಿಗೆ ಯೋಚನೆ ಬಂದು, ಈ ಯೋಚನೆ ಬರುವುದೇ ತಪ್ಪು ಎಂದು ತೀರ್ಮಾನಿಸುತ್ತಾಳೆ. ನಂತರ ಇಂದು ವಾಣಿಯ ಮನೆಯನ್ನು ನೀಟಾಗಿ ಇಟ್ಟಿದ್ದಳು. ಗೃಹಿಣಿಯ ಬದುಕೇ ಹೆಣ್ಣಿನ ಆದರ್ಶ ಕರ್ತವ್ಯ ಎಂಬುದನ್ನು ತ್ರಿವೇಣಿಯವರು ಸಹ ಅವರ ಕತೆ ಕಾದಂಬರಿಗಳಲ್ಲಿ ಕಂಡು ಬಂದಿರುವುದನ್ನು ಕಾಣಬಹುದು. ರತ್ನ ಬಂದು ಏನಮ್ಮ ಮನೆ ಇಷ್ಟು ಸುಂದರವಾಗಿದೆ ಎಂದು ಕೇಳಿದಾಗ, ವಾಣಿಯೇ ಹೇಳಿಬಿಟ್ಟಳು ನಮ್ಮ ಮನೆ ಇಷ್ಟು ಸುಂದರವಾಗಿರಲು ಇಂದುವೇ ಕಾರಣ ಎಂದು. ರತ್ನ ಅವತ್ತಿನಿಂದ ಇಂದುವನ್ನು ನೋಡಲು ಪರಿತಪಿಸುತ್ತಿದ್ದ, ಗೊತ್ತಿಲ್ಲದೆ ಇಂದುವಿನ ಚಿತ್ರವನ್ನು ಮನಸ್ಸಿನಲ್ಲಿ ಸ್ಥಾಪಿಸಿಕೊಳ್ಳುತ್ತಾನೆ.

ಇಂದುವಿನ ಒಳ್ಳೆಯ ವ್ಯಕ್ತಿತ್ವವನ್ನು ಈ ಕಥೆಯಲ್ಲಿ ಕಾಣಬಹುದು. ಅವಳಿಗೆ ರತ್ನನ ಮೇಲೆ ಆಸೆ ಹುಟ್ಟಿದರೂ ಸಹ ಪರಪುರುಷರನ್ನು ಮೋಹಿಸುವುದು ತಪ್ಪೆಂದು ತಿಳಿದು ಮನೆಯನ್ನು ಬಿಡಲು ಮುಂದಾದಳು. ನೊಂದ ಇಂದು ಅಂದರೆ ಮನೋವೈಜ್ಞಾನಿಕವಾಗಿ ನರಳುವುದನ್ನು ಸಹ ನೋಡಬಹುದು. ಒಬ್ಬಂಟಿ ಹೆಣ್ಣೊಬ್ಬಳು ಪರಪುರುಷರನ್ನು ನೋಡಿ ಆಸೆಪಟ್ಟು ಕೊನೆಗೆ ಆ ಆಸೆಯಿಂದ ಇನ್ನೊಬ್ಬರ ಜೀವನ ಹಾಳಾಗಬಹುದೆಂದು ಯಾರ ಬಳಿಯೂ ಹೇಳಿಕೊಳ್ಳದೆ ಅವರ ಸಂಬಂಧಿಕರ ಮನೆಗೆ ಹೊರಟು ಹೋಗುತ್ತಾಳೆ. ನಂತರ ವಾಣಿ ಬಂದು ಎಂದೂ ಹೋಗಲ್ಲ ಎಂದು ಹೇಳಿದ್ದ ಇಂದು ಯಾಕೆ ಅವರ ಸಂಬಂಧಿಕರ ಮನೆಗೆ ಹೋದಳು ಎಂಬ ಪ್ರಶ್ನೆ ವಾಣಿಯ ಸಮಸ್ಯೆಯಾಗಿಯೇ ಉಳಿಯಿತು. ಒಟ್ಟಾರೆಯಾಗಿ ಈ ವಾಣಿಯ ಸಮಸ್ಯೆ ಕಥೆಯಲ್ಲಿ ಇಂದುವಿನ ಒಳ್ಳೆಯ ವ್ಯಕ್ತಿತ್ವ, ಹಾಗೂ ಅವಳ ಆತ್ಮಸ್ಥೈರ್ಯವನ್ನು, ಮತ್ತು ಬೇರೆಯವರ ಹಂಗಿಲ್ಲದೆ ತನ್ನಿಚ್ಚೆಯಂತೆ ಸ್ವತಂತ್ರವಾಗಿರಲು ಬಯಸುವುದು ಇಂದಿನ ಕಾಲದ ಎಷ್ಟೋ ಜನ ವಿಧವೆಯರಿಗೆ ಈ ಕಥೆಯ ಇಂದುವಿನ ಪಾತ್ರ ಸ್ಫೂರ್ತಿದಾಯಕವಾಗಿದೆ ಎಂದು ವ್ಯಕ್ತಪಡಿಸುತ್ತೇನೆ.

ಕೊಡಗಿನ ಗೌರಮ್ಮ ಅವರ ಮತ್ತೊಂದು ಕಥೆಯೆಂದರೆ ''ಅವಳಭಾಗ್ಯ'' ಈ ಕತೆಯಲ್ಲಿ ಕೊಡಗಿನ ಗೌರಮ್ಮ ರವರು ಅತ್ಯಂತ ಸುಂದರವಾಗಿ ಮದುವೆಯ ಒಂದು ಚಿಕ್ಕ ಪ್ರಸಂಗವನ್ನು ನಮ್ಮ ಕಣ್ಣಮುಂದೆ ತರಲು ಪ್ರಯತ್ನಿಸಿದ್ದಾರೆ. ಈ ಕಥೆಯು ಸಾಂಪ್ರದಾಯಿಕವಾಗಿ ಪ್ರಾರಂಭ ಆಗುತ್ತದೆ. ಹಾಗೂ ಈ ಕಥೆಯಲ್ಲಿ ಜಾನಪದ ಹಿನ್ನೆಲೆಯನ್ನು ಸಹ ಕಾಣಬಹುದು ಅಂದರೆ ಕೆಲವು ಆಚಾರ–ವಿಚಾರಗಳು ಜಾನಪದ ಹಾಡುಗಳನ್ನೂ ಸಹ ಕಾಣಬಹುದು. ಆದರೆ ಇತ್ತೀಚಿನ ದಿನಗಳಲ್ಲಿ ಸಂಬಂಧಗಳೇ ಮನಸ್ತಾಪಗಳಿಂದ ಸ್ವಂತ ಸಂಬಂಧಿಕರ ಮದುವೆಗಳಿಗೆ ಭಾಗಿಯಾಗದೆ ಇರುವುದನ್ನು ಕಾಣಬಹುದು.

ಅವತ್ತಿನ ಕಾಲದಲ್ಲಿ ಸ್ಥಳೀಯ ಭಾಷೆಗೆ ಹೆಚ್ಚು ಪ್ರಾಮುಖ್ಯತೆ ಇತ್ತು. ಆದ್ದರಿಂದ ಸ್ಥಳೀಯ ಹಾಡುಗಳನ್ನು ಹಾಡುತ್ತಿದ್ದರು. ಈ ಕತೆಯಲ್ಲಿ ಕಿಟ್ಟಣ್ಣ ಮದುವೆಯ ಸಂದರ್ಭದಲ್ಲಿ ಯಾರಿಗೂ ಹಾಡು ಹೇಳಲು ಬರದೆ ಇದ್ದಾಗ ''ಪಾರು'' ಎಂಬ 15

ವರ್ಷದ ಹುಡುಗಿಯ ಹತ್ತಿರ ಹಾಡಿಸಿದರು. ನೋಡಲು ಕುರೂಪಿಯಾಗಿದ್ದಳು. ಅವಳ ರೂಪವನ್ನು ನೋಡುವುದಾದರೆ ಪಾರು 15 ವರ್ಷದ ಪ್ರಾಯದವಳು ಆದರೆ ಬೆಳವಣಿಗೆಯನ್ನು ನೋಡಿದರೆ ವಯಸ್ಸಿಗೆ ಮೀರಿದ ಬೆಳವಣಿಗೆಯಾಗಿತ್ತು. ಇದ್ದಲಿನಂತೆ ಮೈಬಣ್ಣ, ಒಂದೆರಡು ತಿಂಗಳು ಕಾಯಿಲೆ ಬಿದ್ದಿದ್ದಳಂತೆ, ತಲೆಕೂದಲೆಲ್ಲಾ ಉದುರಿ ಆಗತಾನೇ ಪುನಃ ಬರಲು ಪ್ರಾರಂಭವಾಗಿತ್ತಷ್ಟೇ. ಚಪ್ಪಟೆ ಮೂಗು, ಇನ್ನು ಕಣ್ಣು? ಯಾವಾಗಲೂ ರೆಪ್ಪೆಗಳ ಅಡಿಯಲ್ಲೇ ಅಡಗಿಕೊಂಡಿರುತ್ತಿದ್ದ ಅವಳ ಕಣ್ಣುಗಳನ್ನು ನೋಡಿ ನಿರೂಪಕಿ ಈ ರೀತಿಯಾಗಿ ಹೇಳುತ್ತಾರೆ; ಅವಳ ಕಣ್ಣುಗಳನ್ನು ನಾನು ನೋಡಿರಲಿಲ್ಲ, ಆದರೂ ಅವುಗಳನ್ನು ಮುಚ್ಚಿಕೊಂಡಿದ್ದ ಉದ್ದವಾದ ರೆಪ್ಪೆಗಳನ್ನು ನೋಡಿ ಈ ಅವಲಕ್ಷಣದ ಮುಖಕ್ಕೆ ಇಷ್ಟೊಂದು ಸೊಗಸಾದ ರೆಪ್ಪೆಗಳು ಏಕೆ? ಎಂದೆನಿಸಿತ್ತು. ಆದರೂ ಪಾರು ತುಂಬಾ ಚೆನ್ನಾಗಿ, ಸೊಗಸಾಗಿ, ಹಾಡುತ್ತಿದ್ದಳು. ಆದ್ದರಿಂದಲೇ ಯಾವುದೇ ಹೆಣ್ಣಿನ ರೂಪ, ಅಥವಾ ಮುಖವನ್ನು ನೋಡಿ ತಿರಸ್ಕಾರ ಮಾಡಬಾರದು ಎಂದು ಹೇಳಲಾಗಿದೆ. ಹೆಣ್ಣಿನ ರೂಪದ ಬಗ್ಗೆ ಎಂತಹ ಸಾಮಾಜಿಕ ಭಾವನೆಗಳಿದ್ದರೂ ರೂಪವು ಹೆಣ್ಣಿನ ತಿರಸ್ಕಾರಕ್ಕೆ ಕಾರಣವಾಗಿತ್ತು, ಎಂಬುವುದರ ಸಾಮಾಜಿಕ ಚಿತ್ರಣ ನೀಡುವ ಕಥೆ" ಅವಳಭಾಗ್ಯ" ಕುರೂಪದಲ್ಲೂ ಪ್ರತಿಯೊಂದು ಅಡಗಿರುತ್ತದೆ ಎಂಬುದಕ್ಕೆ ಕಥೆಯಲ್ಲಿನ "ಪಾರು"ವಿನ ಪಾತ್ರ ಸಾಕ್ಷಿಯಾಗಿದೆ. "ಬದುಕು, ಆಸೆ, ರೋಗ, ರೂಪ ಎಲ್ಲವೂ ಪ್ರಕೃತಿದತ್ತವೇ ಆಗಿವೆ" ಎಂಬ ಸತ್ಯದ ಮಾತು ಚಿಂತನೆಗೆ ಹಚ್ಚುತ್ತದೆ.

ಅಂದಿನ ಸಮಾಜ ಕುರೂಪಿ ಹೆಣ್ಣುಗಳನ್ನು ನೋಡುತ್ತಿದ್ದ ದೃಷ್ಟಿಕೋನವನ್ನು ಕಥೆಯ ಕೊನೆಯ ಸಾಲುಗಳು ಸಾರುತ್ತವೆ. "ಗುಮಾಸ್ತನ ಮಗಳಿಗೆ ಯೋಗ್ಯತೆ ಮೀರಿದ ಗಂಡು ಸಿಕ್ಕಿದ, ವರದಕ್ಷಿಣೆ ಇಲ್ಲದೆ, ಅತ್ತೆ ಮಾವನ ಕಾಟವಿಲ್ಲದೆ, ಎರಡೂ ಖರ್ಚುಹಾಕಿ ಮದುವೆ ಮಾಡಿಕೊಂಡ ಗಂಡಿಗೆ ಸ್ವಲ್ಪ ಕ್ಷಯರೋಗ! ಆತನ ಆರೈಕೆ ಮಾಡಿಕೊಂಡಿದ್ದರೆ ಸರಿ. ಉಂಡುಟ್ಟು ಸುಖವಾಗಿರಲು ಯಾವ ತೊಂದರೆಯೂ ಇಲ್ಲ, ನಿಜವಾಗಿಯೂ ಪಾರು ಭಾಗ್ಯಶಾಲಿ ಎಂಬುದನ್ನು ಲೇಖಕಿ ಈ ಕಥೆಯಲ್ಲಿ ವ್ಯಕ್ತಪಡಿಸಿದ್ದಾರೆ. ಆದರೆ ನನಗೆ ಇಲ್ಲಿ ಒಂದು ಪ್ರಶ್ನೆ ಉಂಟಾಯಿತು, ಯಾಕೆ ಅವಲಕ್ಷಣದ ಪಾರೂಗೆ ರೋಗವಿರುವ ಒಬ್ಬ ವ್ಯಕ್ತಿಯನ್ನು ಮದುವೆ ಮಾಡಿದರೂ, ಅವಳು ಅವಲಕ್ಷಣದವಳು ಸರಿ ಅದು ಅವಳ ತಪ್ಪಲ್ಲ, ಅದರ ಬದಲು ಬೇರೊಂದು ಹುಡುಗನ ಜೊತೆ ಮದುವೆ ಮಾಡಬಹುದಿತ್ತು. ಅವಳು ನೂರು ಕಾಲ ಸುಮಂಗಳಿಯಾಗಾದರೂ ಇರುತ್ತಿದ್ದಳು. ಅವನು ಎಷ್ಟು ದಿನ ಬದುಕಿರುತ್ತಾನೋ ಗೊತ್ತಿಲ್ಲ. ಅವನು ಸತ್ತ ಮೇಲೆ ಅವಳ ಜೀವನ ಹೇಗೆ, ಎಂಬುದು ಕಾಡುವ ಪ್ರಶ್ನೆಯಾಗಿಯೇ ಉಳಿಯಿತು. ಇತ್ತೀಚಿನ ದಿನಗಳಲ್ಲಿ ನಾನು ಸಾಮಾಜಿಕ ಜಾಲತಾಣಗಳಲ್ಲಿ ಗಮನಿಸಿದ ಕೆಲವು ಅಂಶಗಳೆಂದರೆ ವಿಕಲಚೇತನರನ್ನು ಮತ್ತೊಬ್ಬ ವಿಕಲಚೇತನರು ವಿವಾಹಗಳಾಗಿರುವುದನ್ನು ಗಮನಿಸಿದ್ದೇನೆ. ಮತ್ತು ಕಣ್ಣು ಕಾಣದವರು ಮದುವೆಯಾಗುತ್ತಿದ್ದಾರೆ ಅಂದರೆ ಸಮಾಜ ಬದಲಾವಣೆಯನ್ನು ಬಯಸುತ್ತಿದೆ ಎಂಬುದನ್ನು ವ್ಯಕ್ತಪಡಿಸುತ್ತೇನೆ.

“ಮನುವಿನರಾಣಿ” ಎಂಬ ಕಥೆಯಲ್ಲಿ ಕೇಂದ್ರಬಿಂದುವಾಗಿ ವೇಶ್ಯೆಯರಲ್ಲಿರುವ ಹೃದಯವಂತಿಕೆಯನ್ನು ಕಾಣಬಹುದು. ನಮ್ಮ ಸಮಾಜದಲ್ಲಿ ವೇಶ್ಯೆಯರು ಇದ್ದಾರೆ ಎಂದರೆ ಅದು ಆ ಹೆಣ್ಣಿನ ತಪ್ಪಲ್ಲ ಅದು ಅವಳ ಒಳ ಪರಿಸ್ಥಿತಿಯನ್ನು ಬದಲಾಯಿಸಬೇಕೆ ಹೊರತು ಪರಿಸ್ಥಿತಿ ನಮ್ಮನ್ನು ಬದಲಾಯಿಸಲು ಬಿಡಬಾರದು. ವಿಪರ್ಯಾಸ ಏನೆಂದರೆ ರಾಜಮ್ಮನ ಸ್ವಂತ ತಾಯಿಯೇ ತನ್ನವಳನ್ನು ವೇಶ್ಯೆಗೆ ದೂಡುವುದಾಗಿದೆ. ಯಾವ ತಾಯಿಯೂ ಸಹ ತಮ್ಮ ಮಕ್ಕಳನ್ನು ವೇಶ್ಯೆಯಾಗಿ ನೋಡಲು ಇಷ್ಟಪಡುವುದಿಲ್ಲ. ಇಂತಹ ಒಂದು ಘಟನೆ ಕಲ್ಪನೆಗೂ ಮೀರಿದ್ದಾಗಿದೆ. ಇದಕ್ಕೆ ಮುಖ್ಯ ಕಾರಣ ಹಸಿವು ನೀಗದ ಬಡತನ ಎಂದೇ ಹೇಳಬಹುದು. ನಮಗೆ ಅನಿವಾರ್ಯವಾದಂತಹ ಸಂದರ್ಭದಲ್ಲಿ ಯಾವುದು ಸರಿ ಯಾವುದು ತಪ್ಪು ಎಂದು ಯೋಚಿಸದೇ ಈ ಕಾರ್ಯಕ್ಕೆ ಮುಂದಾಗುತ್ತಾರೆ. ಅದೇ ರೀತಿಯಾಗಿ ತ್ರಿವೇಣಿ ಅವರ 'ಹೂವು ಹಣ್ಣು' ಎಂಬ ಕಾದಂಬರಿಯಲ್ಲಿ ಒಬ್ಬಳು ವಿಧವೆಯಾದ ನಂತರ ತನ್ನ ವಂಶದ ಕುಡಿಯನ್ನು ಸಾಕಲು ನಡೆಸುವ ಹೋರಾಟದಲ್ಲಿ ಕಾಮುಕರ ಕಣ್ಣಿನಿಂದ ಪಾರಾಗದೆ ಅನಿವಾರ್ಯವಾಗಿ ವೇಶ್ಯೆ ಜೀವನ ನಡೆಸುವ ದಾರುಣ ಪರಿಸ್ಥಿತಿಯನ್ನು ನಾವು ಕಾಣಬಹುದು. ರಾಜಮ್ಮನ ತಾಯಿಯೂ ಸಹ ಅನಿವಾರ್ಯವಾಗಿ ಮಗಳನ್ನು ವೇಶ್ಯಾವಾಟಿಕೆಗೆ ಬಿಡುವುದನ್ನು ಕಾಣಬಹುದು. ನವೋದಯ ಕಾಲದಲ್ಲಿ ಉಳ್ಳವರ ಆಸೆ ಪೂರೈಸಲು ಹೆಣ್ಣುಮಕ್ಕಳನ್ನು ಬಲವಂತದಿಂದ ವೇಶ್ಯಾವಾಟಿಕೆಗೆ ಕಳುಹಿಸುತ್ತಿದ್ದರು. ಈ ಕಥೆಯಲ್ಲಿ “ಮೋಹನ" (ಮನು) ಎಂಬುವವರು ಕಥೆಯ ನಾಯಕಿಯಾದ ಸೂಳೆ ರಾಜಮ್ಮನನ್ನು ತುಂಬಾ ಆಳವಾಗಿ ಪ್ರೀತಿಸುತ್ತಾನೆ. ಸೂಳೆಯಾದ ರಾಜಮ್ಮ ಸಹ ಪ್ರೀತಿಸತೊಡಗಿದಳು. ಪ್ರತಿದಿನ ರಾಜಮ್ಮನಿಗಾಗಿ ಅವರ ಮನೆಗೆ ಬರತೊಡಗಿದನು. ಮೊದಲೇ ರಾಜಮ್ಮನ ತಾಯಿ ಸೂಳೆಯರಿಗೆ ಹೃದಯವಿರಬಾರದೆಂದು ಹೇಳಿದ್ದರೂ ಸಹ ರಾಜಮ್ಮ ಮನುವನ್ನು ಪ್ರೀತಿಸಿದಳು. ಅದಕ್ಕೆ ಪ್ರೀತಿಗೆ ಕಣ್ಣಿಲ್ಲ, ಪ್ರೀತಿ ಯಾರ ಮೇಲಾದರೂ, ಯಾವಾಗ ಬೇಕಾದರೂ ಹುಟ್ಟಬಹುದು ಎಂಬುದನ್ನು ಈ ಕಥೆಯ ಮೂಲಕ ಗ್ರಹಿಸಬಹುದು.

ವಿಪರ್ಯಾಸ ಎಂದರೆ ರಾಜಮ್ಮನ ತಾಯಿಯೇ ಅವರಿಬ್ಬರನ್ನು ದೂರ ಮಾಡುವುದನ್ನು ಈ ಕಥೆಯಲ್ಲಿ ಕಾಣಬಹುದು. ಆದರೂ ಸಹ ರಾಜಮ್ಮ ಮನುವಿಗೆ ಹುಚ್ಚು ಹಿಡಿದು ಆರೋಗ್ಯ ಸರಿ ಇಲ್ಲ ಎಂದು ಸ್ನೇಹಿತರಿಂದ ತಿಳಿದು ತಾಯಿಗೂ ಸಹ ಹೇಳದೆ ಶಾಶ್ವತವಾಗಿ ಮನೆಯಿಂದ ಆಚೆಬಂದು ಹುಡುಕಿಕೊಂಡು ಹೋಗಿರುತ್ತಾಳೆ. ದಾರಿಯಲ್ಲಿ ಅನಾರೋಗ್ಯದಿಂದ ನರಳುತ್ತಿದ್ದಮನುವನ್ನು ಕಂಡು ಆನಾರೋಗ್ಯವನ್ನು ಸರಿಪಡಿಸಲು ವೈದ್ಯರನ್ನು ಕರೆಯಲು ಹೋದಾಗ ಎಲ್ಲರೂ ವೇಶ್ಯೆ ಎಂದು ತಿಳಿದು ನಿರಾಕರಿಸುತ್ತಾರೆ. ಯಾರು ಸಹ ಮನುವಿಗೆ ಚಿಕಿತ್ಸೆ ಮಾಡಲು ಮುಂದೆ ಬರುವುದಿಲ್ಲ. ಮನುವಿಗೆ ವೈದ್ಯ ಮಾಡಲು ತನ್ನ ಹೆಂಡತಿಯಾದ ಪಾರ್ವತಿಯು ರಾಜಮ್ಮನ ಮನೆಗೆ ಕಳುಹಿಸಲು ಒಪ್ಪುವುದಿಲ್ಲ. ಏಕೆಂದರೆ ಅವಳು ಒಬ್ಬ ಸೂಳೆ ಎಂಬ ಕಾರಣಕ್ಕೆ ಪಾರ್ವತಿ ಒಪ್ಪುವುದಿಲ್ಲ. ಹೆಣ್ಣಿಗೆ ಹೆಣ್ಣೇ ಶತ್ರು ಎಂಬ ಮಾತು ಸತ್ಯ ಎಂದು ಈ ಕಥೆಯಲ್ಲಿ ತಿಳಿಯುತ್ತದೆ. ಆದರೂ ವೈದ್ಯರಾದ ನಿರೂಪಕ ತನ್ನ ಹೆಂಡತಿಯ ಮಾತನ್ನು

ಸಹ ಕೇಳದೆ ಚಿಕಿತ್ಸೆ ಮಾಡಲು ನಿರ್ಧಾರ ಮಾಡಿ ರಾಜಮ್ಮನ ಮನೆಗೆ ಹೋಗಿ ಮನುವಿಗೆ ಚಿಕಿತ್ಸೆ ಮಾಡುತ್ತಾರೆ. ಆದರೆ ಅವನನ್ನು ಉಳಿಸಿ ಕೊಡುವುದಕ್ಕೆ ವೈದ್ಯರಿಂದ ಸಾಧ್ಯವಾಗಲಿಲ್ಲ.

ಕೊನೆಗೆ ರಾಜಮ್ಮ ಒಂಟಿಯಾದಳು. ಇದಕ್ಕೆಲ್ಲಾ ರಾಜಮ್ಮನ ತಾಯಿಯೇ ಕಾರಣ ಎಂದು ಒಂದು ಪತ್ರದ ಮೂಲಕ ವೈದ್ಯರಿಗೆ ತನ್ನ ಜೀವನದ ಬಗ್ಗೆ ಹೇಳಿಕೊಂಡಳು. ನಂತರ ನಿಜವನ್ನು ತಿಳಿದು ಪಾರ್ವತಿ ಪಶ್ಚಾತಾಪಗೊಂಡ ಬಗೆಯನ್ನು ಸಹ ಈ ಕಥೆಯಲ್ಲಿ ನೋಡಬಹುದು. ಮತ್ತು ವೈದ್ಯರಾದ ನಿರೂಪಕನ ಒಳ್ಳೆಯ ವ್ಯಕ್ತಿತ್ವವನ್ನು ಕಾಣಬಹುದು ಏಕೆಂದರೆ ವೇಶ್ಯೆ ಎಂದು ತಿಳಿದರೂ ಸಹ ಮನುವಿಗೆ ಮಾನವೀಯತೆಯಿಂದ ಚಿಕಿತ್ಸೆ ಮಾಡಿದರು. ಆದರೆ ಇತ್ತೀಚಿನ ದಿನಗಳಲ್ಲಿ ಅನಾರೋಗ್ಯದಿಂದ ಜನರು ದವಾಖಾನೆಗೆ ಹೋದಂತಹ ಸಂದರ್ಭದಲ್ಲಿ ಕನಿಷ್ಠ ಮನುಷ್ಯ ಎಂದು ಮುಟ್ಟಿ ನೋಡದೆ ಬೇಜವಾಬ್ದಾರಿತನವನ್ನು ತೋರಿಸುವುದನ್ನು ನೋಡಬಹುದು.

ಒಟ್ಟಾರೆಯಾಗಿ ಮನುವಿನರಾಣಿ ಕಥೆಯಲ್ಲಿ ರಾಜಮ್ಮ ವೇಶ್ಯೆತನದಿಂದ ಏನೆಲ್ಲಾ ಕಷ್ಟಗಳನ್ನು ಅನುಭವಿಸಿ ಕೊನೆಗೆ ಮೋಹನ ಎಂಬುವವರನ್ನು ಪ್ರೀತಿಸಿ ನಾನು ಮಾಡುವುದು ತಪ್ಪೆಂದು ತಿಳಿದು ಸಂಪ್ರದಾಯ ಕಟ್ಟುಪಾಡುಗಳಿಂದ ವೇಶ್ಯೆತನದಿಂದ ಬಿಡುಗಡೆಯನ್ನು ಪಡೆದು ಪ್ರೀತಿಸಿದ ಮನುವನ್ನು ಸಹ ಕಳೆದುಕೊಂಡಳು. ರಾಜಮ್ಮನಿಗೆ ಎಲ್ಲಿ ಬಿಡುಗಡೆಯಾಯಿತು ಎಂಬುದು ನನ್ನ ಪ್ರಶ್ನೆಯಾಗಿ ಉಳಿಯಿತು.

ಕೊಡಗಿನ ಗೌರಮ್ಮನವರು ಬರೆದಿರುವ ಮತ್ತೊಂದು ಕಥೆಯೆಂದರೆ "ಆಹುತಿ" ಈ ಕತೆಯಲ್ಲಿ ಬಡತನದ ಹೆಣ್ಣುಮಕ್ಕಳು ಅತೀ ಹೆಚ್ಚಾಗಿ ವರದಕ್ಷಿಣೆ ಎಂಬ ಪಿಡುಗಿಗೆ ಆಹುತಿ (ಬಲಿ)ಯಾಗಿರುವುದನ್ನು ಕಾಣಬಹುದು. ಎಷ್ಟೋ ಬಡ ಕುಟುಂಬಗಳು ವರದಕ್ಷಿಣೆ ಕೊಡಲು ಆಗದೇ ಕುಟುಂಬವೇ ಆತ್ಮಹತ್ಯೆ ಮಾಡಿಕೊಂಡಿರುವ ಉದಾಹರಣೆಗಳನ್ನು ಕಾಣಬಹುದು. ಅದರಲ್ಲೂ ವಿದ್ಯಾಭ್ಯಾಸ ಮಾಡಿರುವವರೇ ವರದಕ್ಷಿಣೆಯನ್ನು ಬಯಸುತ್ತಾರೆ. ನಾವು ವಿದ್ಯೆ ಕಲಿತಿರುವುದು ಆ ಸಾಮಾಜಿಕ ಸಮಸ್ಯೆಗಳನ್ನು ತೊಲಗುವಂತೆ ಮಾಡಬೇಕೆ ಹೊರತು ವರದಕ್ಷಿಣೆಯನ್ನು ಬಯಸಿ ಹಿಂಸಿಸಲು ಅಲ್ಲ. ಈ ಸಮಸ್ಯೆ ಇಂದು ನಿನ್ನೆಯದಲ್ಲ ಸುಮಾರು 60ರ ದಶಕದಲ್ಲಿತ್ತು ಎನ್ನುವುದಕ್ಕೆ ಕೊಡಗಿನ ಗೌರಮ್ಮನವರ "ಆಹುತಿ" ಕತೆಯೇ ಸಾಕ್ಷಿ. ಪ್ರೌಢಶಾಲೆಯ 10ನೇ ತರಗತಿ ಕನ್ನಡ ಪಠ್ಯಪುಸ್ತಕದಲ್ಲಿ ಪಾಠವಾಗಿ ಇವತ್ತಿಗೂ ಇದೆ. ಈ ಕಥೆಯಲ್ಲಿ ವರದಕ್ಷಿಣೆಯ ಕಠೋರ ಸಂಪ್ರದಾಯವನ್ನು ಅದರಿಂದ ಸಮಾಜದಲ್ಲಿ ಸಂಭವಿಸುತ್ತಿರುವ ಭೀಕರ ಪರಿಣಾಮಗಳ ಒಂದು ಚಿತ್ರವನ್ನು ಚಿತ್ರಿಸಲಾಗಿದೆ. ಮೇಲ್ನೋಟಕ್ಕೆ ಕತೆಯಲ್ಲಿ ಸರಳತೆ ಇದೆ ಎನಿಸಿದರೂ ಸಂಕೀರ್ಣತೆ ಇದೆ. ಕಾಲದೇಶಗಳನ್ನು ಮೀರಿಸುವ ಮನುಷ್ಯ ಸ್ವಭಾವದ ಪರಿಚಯವಿದೆ. ವರದಕ್ಷಿಣೆ ಎಂಬ ಪೆಡಂಭೂತ ಸಮಸ್ಯೆ ಪ್ರತ್ಯೇಕ ಸಮಸ್ಯೆಯಾಗದೇ ಇತರ ಸಾಮಾಜಿಕ ಸಮಸ್ಯೆಗಳಲ್ಲಿ ಹಾಸುಹೊಕ್ಕಾಗಿದೆ ಎಂದು ನಿರೂಪಿಸಲಾಗಿದೆ. ವರದಕ್ಷಿಣೆಗಾಗಿ ಮತ್ತು

ಪದವೀಧರ ಯುವಕನೊಬ್ಬನ ವಿದೇಶಿ ವಿದ್ಯಾಭ್ಯಾಸದ ಆಮಿಷಕ್ಕೆ ‘‘ಶಾಂತಿ’’ ಎಂಬ ಮುಗ್ಧೆ ಬಲಿಯಾಗುವ ಚಿತ್ರಣವಿದೆ. ತಾನು ತಿರಸ್ಕರಿಸಿದ ಬಡ ಹುಡುಗಿಯನ್ನು ಪ್ರೀತಿಸುವ ಯುವಕನಿಗೆ ನಿಜಸಂಗತಿ ತಿಳಿಯುವ ವೇಳೆಗೆ ಆ ಹುಡುಗಿ ತನ್ನ ತಂದೆ ಆರಿಸಿದ ಮುದುಕನನ್ನು ಮದುವೆಯಾಗಲು ನಿರಾಕರಿಸಿ ಆತ್ಮಹತ್ಯೆಗೆ ಶರಣು ಹೋಗುತ್ತಾಳೆ. ಈ ರೀತಿಯಾಗಿ ಬಿಡುಗಡೆಯನ್ನು ಪಡೆದುಕೊಳ್ಳುವುದು ಬಹಳ ದುರಂತದ ವಿಷಯವೆನ್ನಬಹುದು.

ಮತ್ತೊಂದು ಕಥೆ "ಹೋಗಿಯೇ ಬಿಟ್ಟಿದ್ದ" ಈ ಕಥೆಯಲ್ಲಿ ಅಂತರ್ಜಾತೀಯ ವಿವಾಹದ ಬಗ್ಗೆ ಪ್ರಸ್ತಾಪಿಸಿದ್ದಾರೆ. ಅವತ್ತಿನ ಕಾಲದಲ್ಲಿ ಇಸ್ಲಾಂ ಧರ್ಮದ ಹೆಣ್ಣು ಮಕ್ಕಳು ಯಾವ ರೀತಿಯಾಗಿ ಸಾಂಪ್ರದಾಯಿಕ ಕಟ್ಟುಪಾಡುಗಳಿಗೆ ಒಳಗಾಗಿ ಏನೆಲ್ಲ ಕಷ್ಟಗಳನ್ನು ಅನುಭವಿಸಿದ್ದರು, ಅದರಲ್ಲೂ ಪ್ರೀತಿಯ ವಿಚಾರದಲ್ಲಿ ಬೇರೆ ಜಾತಿಯವರನ್ನು ಪ್ರೀತಿಸುವ ಹಾಗೆ ಇರಲಿಲ್ಲ. ಆದರೆ ಈ ಕಥೆಯಲ್ಲಿ ಲತೀಫಾಳು ಬೇರೆ ಜಾತಿಯ ಹುಡುಗನನ್ನು ಪ್ರೀತಿಸಿರುತ್ತಾಳೆ. ಮನೆಯವರಿಗೆ ಹಿಂತಿರುಗಿ ಮಾತಾಡದೆ ಬೇರೆ ಹುಡುಗನನ್ನು ವಿವಾಹವಾಗಿ ಕೊನೆಗೆ ಆ ಸಂಸಾರದಲ್ಲಿ ನೆಮ್ಮದಿ ಇಲ್ಲದೆ ಪ್ರೀತಿಸಿದ ಹುಡುಗನನ್ನು ಮರೆಯದೆ ಕೊನೆಗೆ ತನ್ನ ಪ್ರಾಣವನ್ನೇ ಮುಡಿಪಾಗಿಟ್ಟುಕೊಂಡಿರುವುದನ್ನು ಈ ಕಥೆಯಲ್ಲಿ ಕಾಲದಲ್ಲಿನ ಕಾಣಬಹುದು.

ಈ ಸಂದರ್ಭದಲ್ಲಿ ಗೀತಾ ನಾಗಭೂಷಣ ರವರು ಬರೆದಿರುವ 'ಜ್ವಲಂತ' ಕಥೆ ನನಗೆ ನೆನಪಾಯಿತು. ಈ ಕಥೆಯಲ್ಲಿ ಕೆಳವರ್ಗದ ಮಹಿಳೆಯಾದ ಸೀನಿಂಗಿಯೂ ಒಬ್ಬಂಟಿಯಾಗಿ ಊರಿನಿಂದಾಚೆಗೆ ಜೀವನವನ್ನು ನಡೆಸುತ್ತಿರುತ್ತಾಳೆ. ಊರಿನ ಗಂಡಸರೆಲ್ಲಾ ಅವಳ ಮೇಲೆ ಕಣ್ಣಾಕಿದ್ದರು, ಆದರೆ ಸೀನಿಂಗಿ ತುಂಬ ಧೈರ್ಯಶಾಲಿಯಾಗಿದ್ದಳು, ಅವಳ ಗುಡಿಸಲಿಗೆ ಬಂದಂತಹ ಗಂಡಸರನ್ನು ಒಡೆದು ಆಚೆ ಹಾಕುತ್ತಿದ್ದಳು. ಅದನ್ನು ಕಂಡು ಯಾರೂ ಅವಳ ಬಳಿ ಹೋಗಲು ಯೋಚಿಸುತ್ತಿರಲಿಲ್ಲ. ಇಂತಹ ಸಂದರ್ಭದಲ್ಲಿ ಕುಲಕರ್ಣಿ ರಾಘವೇಂದ್ರಪ್ಪನವರು ಸ್ವತಃ ಬಂದು ನನ್ನನ್ನು ಮದುವೆಯಾಗು ಎಂದು ಕೇಳಿದಾಗ ಸೀನಿಂಗಿ ಇರುವಂತಹ ಸಂದರ್ಭದಲ್ಲಿ, ಒಬ್ಬಂಟಿ ಹೆಣ್ಣು ಜೀವನ ನಡೆಸುವುದು ಕಷ್ಟ ಎಂದು ತಿಳಿದು ಸಾಂಪ್ರದಾಯಿಕ ಕಟ್ಟುಪಾಡುಗಳಿಂದ ಹೊರಬಂದು ಮೇಲ್ವರ್ಗಕ್ಕೆ ಸೇರಿದ ಕುಲಕರ್ಣಿ ರಾಘವೇಂದ್ರಪ್ಪ ಅವರನ್ನು ಅಂತರ್ಜಾತಿ ವಿವಾಹವಾಗುವುದರ ಮುಖಾಂತರ ಬಿಡುಗಡೆಯನ್ನು ಪಡೆದುಕೊಳ್ಳುವುದನ್ನು ಗಮನಿಸಬಹುದು.

"ಹೋಗಿಯೇ ಬಿಟ್ಟಿದ್ದ" ಕಥೆ ಶುರುವಾಗುವುದು 60 ವರ್ಷದ ಮುದುಕನಿಂದ, ಆ ಮುದುಕ ತನ್ನ ಜೀವನದಲ್ಲಿ ಕಳೆದುಹೋದ ಜೀವನವನ್ನು ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದ ಐವರು ಸ್ನೇಹಿತರ ಬಳಿ ಮುದುಕ ಕಥೆಯನ್ನು ಹೇಳಿಕೊಳ್ಳುತ್ತಾನೆ. ಕತೆಯ ಮೂಲಕ ಅವನ ಮತ್ತು ಲತೀಫಾಳ ಪ್ರೀತಿಯ ಬಗ್ಗೆ ಹೇಳತೊಡಗಿದ. ಅವರಿಗೆ ಮೊದಲು ಇಷ್ಟ ಇಲ್ಲದಿದ್ದರೂ ಮುದುಕನು ಬೇಜಾರು ಮಾಡಿಕೊಳ್ಳುತ್ತಾನೆಂದು ಎಲ್ಲರೂ ಸಮ್ಮತಿ ತೋರಿದರು. ಹೀಗೆ ಅವನ ಪೂರ್ವ ಕಥೆಯಲ್ಲಿ ಅವನು ಹೇಗಿದ್ದ

ಎಂದು ಹೇಳುತ್ತಾ ಹೋಗುತ್ತಾನೆ. ಈ ರೀತಿಯಾಗಿ ಇಬ್ಬರು ಒಬ್ಬರನ್ನೊಬ್ಬರು ಬಿಟ್ಟಿರಲಾರಷ್ಟು ಪ್ರೀತಿಮಾಡಿದ್ದರು. ಅವನು ಅವಳಿಗಾಗಿ ಧರ್ಮವನ್ನು ಬಿಡಬೇಕೆನ್ನುವಷ್ಟು! ಅವಳು ಅವನಿಗಾಗಿ ಜೀವನವನ್ನೇ ಧಾರೆ ಎರೆಯಲು ಸಿದ್ಧಳಾಗಿದ್ದಳು. ಅವಳ ಚಿಕ್ಕಪ್ಪ ಅವಳಿಗೆ ಮದುವೆ ಮಾಡಿ ಬಿಡಬೇಕೆಂದು ನಿಶ್ಚಯಿಸಿ ಬೇರೆಯವರಿಗೆ ನೂರು ರೂಪಾಯಿಗೆ ವರದಕ್ಷಿಣೆಯನ್ನು ಕೊಟ್ಟು ಬಲವಂತವಾಗಿ ಮದುವೆ ಮಾಡಿಸಿದ. ಆದರೆ ಅವಳಿಗೆ ಇಷ್ಟವಿಲ್ಲ.

ಲತೀಫಾಳು ಪ್ರೀತಿಸಿದ ಹುಡುಗನನ್ನು ಮನಸ್ಸಿನಿಂದ ತೆಗೆದುಹಾಕದೆ ಬೇರೆಯವರ ಬಳಿ ಜೀವನ ನಡೆಸಲು ಸಾಧ್ಯವಾಗುವುದಿಲ್ಲ ಎಂದು ಮತ್ತು ಆ ಪ್ರೀತಿ ದೂರವಾಗಿರುವುದು ಈ ಜಾತಿಧರ್ಮದಿಂದಲೇ ಸಾಂಪ್ರದಾಯಿಕ ಕಟ್ಟುಪಾಡುಗಳೇ ಕಾರಣ ಎಂದು ಅದರಿಂದ ಬಿಡುಗಡೆ ಸಿಗುವುದು ನನ್ನ ಸಾವಿನಿಂದಲೇ ಎಂದು ತಿಳಿದ ಲತೀಫಾಳು ಬಾವಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಳು. ಆ ಮುದುಕ ತನ್ನ ಕಥೆಯನ್ನೇ ಹೇಳುತ್ತಿದ್ದಾನೆ ಎಂಬುದು ಯುವಕರಿಗೆ ಕೊನೆಯವರೆಗೂ ತಿಳಿಯುವುದಿಲ್ಲ.

ಚಲಿಸುವ ರೈಲು ಬದುಕಿನ ಸಂಕೇತವಾಗಿದೆ. ಆದರೆ ಮುದುಕನ ಬದುಕು ಚಲನಶೀಲತೆಯನ್ನು ಕಳೆದುಕೊಂಡಿದೆ. ಕಥೆ ಹೇಳುವುದು ಮುಗಿಯುತ್ತಿದ್ದಂತೆ ಮುದುಕ ತಕ್ಷಣ "ಬಿಡುಗಡೆಯಾಯಿತು... ಇನ್ನೇನು ಹೋಗಬಹುದಲ್ಲ ಎಂದು ನೀವು ಕೇಳಬಹುದು. ಹೌದು ಹೋಗಬಹುದು ಇದೋ ಹೊರಟೆ. ಹೋಗುತ್ತೇನೆ" ಎಂದು ಹೇಳುತ್ತಾ ಹೋಗುತ್ತಿದ್ದ ರೈಲಿನ ಕಿಟಕಿಯಿಂದ ಕೆಳಗೆ ಹಾರಿ ಪ್ರಾಣಬಿಟ್ಟಿದ್ದ. ತನ್ನ ಬದುಕಿಗೆ ವಿದಾಯ ಹೇಳಿಕೊಂಡಿದ್ದ. ಆಗಲೇ ಕಥೆ ಕೇಳುತ್ತಿದ್ದ ಯುವಕರಿಗೆ ಗೊತ್ತಾಗುವುದು. ಜಾತಿಗೆ ಪ್ರಾಮುಖ್ಯತೆ ನೀಡಿದ ಸಮಾಜ, ಇಬ್ಬರು ಪ್ರೇಮಿಗಳನ್ನು ಬದುಕಲು ಬಿಡದೆ ಬಲಿ ತೆಗೆದುಕೊಂಡಿತು. ನಿರ್ಮಲ ಪ್ರೇಮಕ್ಕೆ ಬೆಲೆ ಕೊಡದೆ ಸಮಾಜವನ್ನು ಅಸ್ವಸ್ಥ ಸಮಾಜ ಎಂದು ಕಥೆಗಾರ್ತಿ ಸಾಂಕೇತಿಕವಾಗಿ ತೋರಿಸಿದ್ದಾರೆ. ಯುವಕರು ರೈಲು ನಿಲ್ಲಿಸುತ್ತಾರೆ. ಅಸ್ವಸ್ಥ ಸಮಾಜಕ್ಕೆ ಇತಿಶ್ರೀ ಹಾಡದಿದ್ದರೇ ಸಮಾಜದಲ್ಲಿ ಮಾನವ ಮಾನವನಾಗಿರಲು ಸಾಧ್ಯವಿಲ್ಲ. ಜಾತಿ, ಮತ, ಧರ್ಮಗಳಿಗೆ ಪ್ರಾಮುಖ್ಯತೆ ನೀಡಬಾರದು ಎಂಬ ಸಂದೇಶವು ಈ ಕಥೆಯಲ್ಲಿ ಅಡಗಿದೆ. ನಿರ್ಮಲ ಪ್ರೇಮಕ್ಕೆ ಜಾತಿ ಮತಗಳ ಹಂಗು ಬೇಕಿಲ್ಲ ಎಂಬ ಉತ್ತರವನ್ನು ಗೌರಮ್ಮನವರು ನೀಡಿದ್ದಾರೆ.

ಗೌರಮ್ಮನವರ ಮತ್ತೊಂದು ಕಥೆಯೆಂದರೆ 'ಪುನರ್ವಿವಾಹ' ಎಂಬ ಕಥೆಯಲ್ಲಿ ವಿಧವಾ ಪುನರ್ವಿವಾಹದ ಬಗ್ಗೆ ಪ್ರಸ್ತಾಪವಿದೆ. ನವೋದಯ ಕಾಲಘಟ್ಟದಲ್ಲಿ ವಿಧವೆಯರನ್ನು ಸಮಾಜ ಯಾವ ರೀತಿಯಾಗಿ ನೋಡುತ್ತಿತ್ತು ಎಂಬುದನ್ನು ಕೊಡಗಿನ ಗೌರಮ್ಮ ಅವರು ಈ ಕಥೆಯಲ್ಲಿ ತುಂಬಾ ಚೆನ್ನಾಗಿ ಕಟ್ಟಿಕೊಟ್ಟಿದ್ದಾರೆ ಎಂಬುದು ತಿಳಿದು ಬರುತ್ತದೆ. ಬಾಲ ವಿಧವೆಯರ ಬಗ್ಗೆ ಈ ಕಥೆಯಲ್ಲಿ ಕಾಣಬಹುದು, ಅಂದರೆ ಚಿಕ್ಕ ವಯಸ್ಸಿನಲ್ಲಿಯೇ ಮದುವೆ ಮಾಡುವುದರಿಂದ ಎಷ್ಟೋ ಹೆಣ್ಣುಮಕ್ಕಳು ವಿಧವೆಯಾಗಿರುವುದನ್ನು ಕಾಣಬಹುದು. ಮತ್ತು ಈ ಕಥೆಯಲ್ಲಿ ಹೆಣ್ಣುಗಂಡು ಎಂಬ

ಭೇದ ಭಾವವನ್ನು, ಸಾಮಾಜಿಕ ಅಸಮಾನತೆಯನ್ನು ಸಹ ಕಾಣಬಹುದು. ಈ ಕಥೆಯಲ್ಲಿ ನವೋದಯ ಕಾಲದಲ್ಲಿನ ಹೆಣ್ಣು, ಗಂಡಸತ್ತ ಮೇಲೆ ಬೇರೊಂದು ವಿವಾಹ ಆಗುವಂತಿರಲಿಲ್ಲ. ಅದೇ ಕೆಲಸ ಗಂಡಸರು, ಮುದುಕರಾದರೂ ಹೆಂಡತಿ ಸತ್ತ ಮೇಲೆ ಬೇರೆ ಮದುವೆ ಆಗಲು ಬಯಸಿದರೆ ಅದು ತಪ್ಪಲ್ಲ, ಎಂದೂ 19ನೇ ಶತಮಾನದಲ್ಲೂ ಇತ್ತು ಎಂದು ಕಾಣಬಹುದು. ಈ ಕಥೆಯ ನಾಯಕಿ "ರಾಜಿ" ಬಾಲ ವಿಧವೆಯಾಗಿರುತ್ತಾಳೆ, ಇವಳಿಂದ ನಿರೂಪಕ ಬದಲಾವಣೆ ಆಗುತ್ತಾನೆ. ನಿರೂಪಕನ ಮೂಲಕ ಈ ಕಥೆಯನ್ನು ನಿರೂಪಿಸಲು ಗೌರಮ್ಮ ಅವರು ಪ್ರಯತ್ನಿಸಿದ್ದಾರೆ. ಬಾಲ್ಯ ವಿವಾಹದಿಂದ ಪ್ರಾಯದಲ್ಲೇ ಗಂಡನನ್ನು ಕಳೆದುಕೊಂಡ ಸುಮಾರು ಜನ ವಿಧವೆಯರು ವೇಶ್ಯೆಯರಾಗಿರುವುದನ್ನು ನಾವು ನವೋದಯ ಕಾಲದಲ್ಲಿ ಕಾಣಬಹುದು. ಕಾಲದ ಬದಲಾವಣೆಯೊಂದಿಗೆ ಹೆಣ್ಣು ಸಾಂಪ್ರದಾಯಿಕ ಕಟ್ಟುಪಾಡುಗಳಿಂದ ಬಿಡುಗಡೆಯನ್ನು ಪಡೆದುಕೊಂಡಿರುವುದನ್ನು ನಾವೆಲ್ಲರೂ ಆಧುನಿಕ ಯುಗದಲ್ಲಿ ನೋಡಬಹುದು. ಅದಕ್ಕೆ ಮೂಲ ಕಾರಣ ಬ್ರಿಟಿಷರು ಮೊದಲು ಹೆಣ್ಣು ಮಕ್ಕಳಿಗೆ ಕೊಟ್ಟಂತಹ ಶಿಕ್ಷಣದಿಂದಲೇ ಎಂದು ಹೇಳುತ್ತೇನೆ. ನಂತರ ಡಾ. ಬಿ. ಆರ್. ಅಂಬೇಡ್ಕರ್ ಅವರು ಹೆಣ್ಣು ಮಕ್ಕಳಿಗೂ ಸಹ ಅವರದೇ ಆದ ಸ್ಥಾನ ಮಾನ ದೊರಕಬೇಕೆಂದು ಸಂವಿಧಾನದಲ್ಲಿ ಬರೆದಿರುವುದು ಸಹ ಗಮನಿಸಬಹುದು. ಮತ್ತು ಜ್ಯೋತಿಬಾಪುಲೆ, ರಾಜಾರಾಮ್ ಮೋಹನ್‌ರಾಯ್, ದಯಾನಂದ ಸರಸ್ವತಿ, ಹೀಗೆ ಹಲವಾರು ಸಮಾಜ ಸುಧಾರಕರು ಹೆಣ್ಣುಮಕ್ಕಳಿಗೆ ಶಿಕ್ಷಣ ದೊರೆಯಬೇಕೆಂದು ಹಲವಾರು ಚಳುವಳಿಗಳನ್ನು ಮಾಡಿದರು. ಹಾಗೂ ಗಾಂಧೀಜಿ, ನೆಹರುರವರು ಹೆಣ್ಣುಮಕ್ಕಳ ಶಿಕ್ಷಣಕ್ಕೆ ಒತ್ತು ಕೊಡುತ್ತಾ ಬಂದರು.. ಆದ್ದರಿಂದಲೇ 19ನೇ ಶತಮಾನದಲ್ಲಿ ಹೆಣ್ಣು ಮಕ್ಕಳೂ ಸಹ ಕಥೆ, ಕಾದಂಬರಿ, ನಾಟಕ, ಕಾವ್ಯಗಳನ್ನು ಬರೆಯಲು ಮುಂದಾದರು. ಅವರೆಂದರೆ ಬಿ. ಎನ್ ಸುಮಿತ್ರಾಬಾಯಿ, ಕೊಡಗಿನ ಗೌರಮ್ಮ, ತ್ರಿವೇಣಿ, ಹೆಚ್. ಎಸ್. ಶ್ರೀಮತಿ, ಅನುಪಮಾ ನಿರಂಜನ, ಗೀತಾ ನಾಗಭೂಷಣ, ಎಂ.ಕೆ.ಇಂದಿರಾ, ಮೊದಲಾದವರು.

ಅವತ್ತಿನ ಕಾಲದಲ್ಲಿ ವಿಧವೆಯರನ್ನು ಹೇಗೆ ನೋಡುತ್ತಿದ್ದರೋ ಇವತ್ತಿಗೂ ಸಹ ಅದನ್ನು ಕಾಣಬಹುದು. ನವೋದಯ ಕಾಲದಲ್ಲಿ ಹೆಣ್ಣಾಗಿ ಹುಟ್ಟಿರುವುದೇ ತಪ್ಪಾ? ರಾಜಿ ತನ್ನ ಬಾಲ್ಯದಲ್ಲೇ ಗಂಡನನ್ನು ಕಳೆದುಕೊಂಡು ತಾಯಿಯ ಜೊತೆ ಬದುಕುತ್ತಿರುತ್ತಾಳೆ. ವಿಧವೆ ಎಂದು ತಿಳಿಯದೆ ಕುಸುಮಾಳ ತಂದೆ ಹೆಂಡತಿಯನ್ನು ಕಳೆದುಕೊಂಡ ಆರು ತಿಂಗಳಲ್ಲೇ ಬೇರೆ ಮದುವೆಯಾಗಬೇಕೆಂದು ಅವರ ಅಮ್ಮನ ಇಚ್ಛೆಯಿಂದ ಸರಿ ಎನ್ನುತ್ತಾನೆ. ಆದರೆ ರಾಜಿ ವಿಧವೆ ಎಂದು ತಿಳಿದ ಕೂಡಲೆ ಅಯ್ಯೋ ನಾನು ಆ ವಿಧವೆಯನ್ನು ವಿವಾಹ ಆಗಬೇಕೆ ಬೆಳಿಗ್ಗೆ ಎದ್ದ ಕೂಡಲೇ ಅವಳನ್ನು ನೋಡಿದರೆ ಅಮಂಗಳ ಅಂತಹದರಲ್ಲಿ ಪ್ರತಿದಿನ ನಾನು ಅವಳ ಜೊತೆ ಹೇಗೆ ಜೀವನ ಮಾಡಲಿ. ವಿಧವೆಯನ್ನು ವಿವಾಹ ಆದರೆ ನನ್ನ ಕುಲಕ್ಕೆ ಅನಿಷ್ಠ ಎಂದು ಹೇಳುತ್ತಾನೆ.

ಹೆಣ್ಣುಮಕ್ಕಳ ಗಂಡ ಸತ್ತರೆ ಮಾತ್ರ ಅವಳಿಗೆ ವಿಧವೆ ಎಂಬ ಪಟ್ಟ ಕಟ್ಟಿ

ಸಾಂಪ್ರದಾಯಿಕ ಪದ್ಧತಿಗಳಿಗೆ ಕಟ್ಟಿ ಮೂಲೆಗೆ ಕೂರಿಸುತ್ತಾರೆ. ಅದೇ ಹೆಂಡತಿ ಸತ್ತ ಗಂಡನನ್ನು ವಿಧುರರು ಎಂದು ಸಮಾಜದಲ್ಲಿ ಇರಲು ಬಿಡುತ್ತಿದ್ದಾರೆ. ಹೆಂಡತಿ ಸತ್ತ ಆರು ತಿಂಗಳಲ್ಲೇ ಗಂಡು ಪುನರ್ವಿವಾಹ ಆಗಬಹುದು. ಆದರೆ ಗಂಡ ಸತ್ತ ವಿಧವೆಯರಿಗೆ ಮಾತ್ರ ಯಾಕೆ ಆ ಅವಕಾಶವಿಲ್ಲ? ತಾನು ಮೆಚ್ಚಿಕೊಂಡ ಪುಟ್ಟ ಹೆಣ್ಣು ವಿಧವೆ ಎಂದು ತಿಳಿದಾಗ ಸಿಡಿಲು ಬಡಿದಂತೆ ವರ್ತಿಸುತ್ತಾನೆ. ವಿಧವೆಯನ್ನು ಬೆಳಗಿನ ಹೊತ್ತಿನಲ್ಲಿ ನೋಡಿದರೆ ಅಮಂಗಳ ಸರಿ! ಆದರೆ ವಿಧುರನನ್ನು ಎಂದು ಪ್ರಶ್ನಿಸುವ ಬಾಲ ವಿಧವೆ ರಾಜಿಯ ದಿಟ್ಟತನ ಮನ ಸೆಳೆಯುತ್ತದೆ.

**ಉಪಸಂಹಾರ:** ಪ್ರಸ್ತುತ ಲೇಖನದಲ್ಲಿ ಕೊಡಗಿನ ಗೌರಮ್ಮ ಅವರ "ಕಂಬನಿ ಮತ್ತು ಚಿಗುರು" ಎಂಬ ಎರಡು ಕಥಾ ಸಂಕಲನಗಳಲ್ಲಿ ಅವರ ಇಪ್ಪತ್ತೊಂದು ಕಥೆಗಳಲ್ಲಿ ಕೆಲವೊಂದು ಕಥೆಗಳನ್ನು ಲೇಖನಕ್ಕೆ ಆಯ್ಕೆ ಮಾಡಿಕೊಂಡಿದ್ದೇನೆ. ಅವರ ಕಥೆಗಳಲ್ಲಿ ಅನಾವರಣಗೊಂಡಿರುವ ಸಮಸ್ಯೆಗಳಾದ ವರದಕ್ಷಿಣೆ, ಬಾಲ್ಯ ವಿವಾಹ, ಬಡತನ, ವೇಶ್ಯಾ ಸಮಸ್ಯೆ, ಮತ್ತು ಹೆಣ್ಣು ಮಕ್ಕಳಿಗೆ ಕುಟುಂಬಗಳಲ್ಲಿ ಆಗುವ ದೌರ್ಜನ್ಯಗಳು, ವಿಧವಾ ವಿವಾಹ, ಹೀಗೆ ಹಲವಾರು ಸಮಸ್ಯೆಗಳಿಂದ ಯಾವರೀತಿಯಾಗಿ ಬಿಡುಗಡೆಯನ್ನು ಪಡೆದುಕೊಳ್ಳುತ್ತಾಳೆ ಎಂಬುದನ್ನು ಗಮನಿಸಬಹುದು, ಆಧುನಿಕ ಕಾಲದಲ್ಲಿಯೂ ಸಹ ಮೇಲಿನ ಸಮಸ್ಯೆಗಳನ್ನು ಕಾಣಬಹುದು, ಹೀಗೆ ಇದ್ದರೆ ಹೆಣ್ಣು ಬರಿ ನಾಲ್ಕು ಗೋಡೆಗಳ ಮಧ್ಯದಲ್ಲಿಯೇ ಇರಬೇಕಾಗುತ್ತದೆ. ಆದ್ದರಿಂದ ಕೆಟ್ಟ ಆಲೋಚನೆಗಳಿಂದ ಹಿರಿಯರು ಸೃಷ್ಟಿಸಿದ ಸಾಂಪ್ರದಾಯಿಕ ಸಂಕೋಲೆಗಳಿಂದ ಹೊರಬಂದು ಗಂಡಸರಿಗಿಂತ ಹೆಣ್ಣು ಯಾವುದರಲ್ಲಿಯೂ ಹಿಂದಿರಬಾರದೆಂದು ನನ್ನ ಅಭಿಪ್ರಾಯ. ಎಲ್ಲರೂ ಒಂದೇ ಎಂಬ ಮನೋಭಾವದಿಂದ ಇರೋಣ, ಈ ಪ್ರಪಂಚದಲ್ಲಿರುವುದು ಒಂದೇ ಕುಲ, ಮನುಕುಲ. "ಕುಲ ಕುಲವೆಂದು ಹೊಡೆದಾಡದಿರು" ಎಂಬುದು ದಾಸಶ್ರೇಷ್ಠ ಕನಕದಾಸರು ರಚಿಸಿದ ಮಾನವತಾವಾದ ಮತ್ತು ಸಮಾನತೆಯನ್ನು ಸಾರುವ ಪ್ರಸಿದ್ಧ ಕೀರ್ತನೆಯನ್ನು ನೆನೆಯಲು ಇಚ್ಛಿಸುತ್ತೇನೆ.

## ಆಕಾರ ಗ್ರಂಥ:

1. ಕಾಳೇಗೌಡ ನಾಗವಾರ (ಸಂ.), (2014), ಕೊಡಗಿನ ಗೌರಮ್ಮ ಬರೆದ ಕಥೆಗಳು, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.

## ಪರಾಮರ್ಶನ ಗ್ರಂಥಗಳು:

1. ಶಾಕುಂತಲಾ ಸಿದ್ದರಾಮ ದುರಗಿ, (1999), ಆಧುನಿಕ ಕನ್ನಡದಲ್ಲಿ ಮಹಿಳಾ ಸಾಹಿತ್ಯ, ಗುಲ್ಬರ್ಗ: ಉಜ್ವಲ ಪ್ರಕಾಶನ.
2. ರಾಧಾಮಣಿ, (2017), ವಾಣಿ ಮತ್ತು ತ್ರಿವೇಣಿಯವರ ಕಾದಂಬರಿಗಳಲ್ಲಿ ವಿವಾಹ ಸಂಸ್ಥೆಯ ಶೋಧ: ಸ್ತ್ರೀವಾದಿ ವಿಶ್ಲೇಷಣೆ, ಮೈಸೂರು: ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಮಾನಸ ಗಂಗೋತ್ರಿ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.